# ಬ್ಯಾಂಕ್ ಕಾಲೋನಿಯಲ್ಲಿ ನಿತ್ಯ ಕಲ್ಯಾಣ ಕಾರ್ಯಕ್ರಮ

ಚಿತ್ರದುರ್ಗ ಆ. 18 - ಭರವಸೆಯು ಬದ್ಧತೆಯೊಂದಿಗೆ ಸಾಗುವ ಏಣಿ. ಸತ್ಪುರುಷರ, ಸಮಾಜ ಚಿಂತಕರ, ದಾರ್ಶನಿಕರಲ್ಲಿ ಬದ್ಧತೆ ಮತ್ತು ಪ್ರಬುದ್ಧತೆ ಇತ್ತು. ಆದರೆ 21ನೇ ಶತಮಾನದಲ್ಲಿ ಬದುಕುಗಳು ನುಚ್ಚು ನೂರಾಗುತ್ತಿವೆ. ಕಾರಣ ಬದ್ಧತೆ ಇಲ್ಲದಿರುವುದು. ಸಮಾಜದಲ್ಲಿ ಅಪ್ರಬುದ್ಧ ನಡೆ ನುಡಿ ಜಾಸ್ತಿಯಾಗುತ್ತಿರುವುದು ಕಳವಳಕಾರಿಯಾದ ಸಂಗತಿ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಅಭಿಪ್ರಾಯಪಟ್ಟರು.

ನಗರದ ಬ್ಯಾಂಕ್ ಕಾಲೋನಿಯ ಸೇತೂರಾಂ ಅವರ ಮನೆಯಲ್ಲಿ ನಡೆದ ನಿತ್ಯ ಕಲ್ಯಾಣ ಕಾರ್ಯಕ್ರಮದ ದಿವ್ಯಸಾನ್ನಿಧ್ಯ ವಹಿಸಿ ಭರವಸೆಯ ವ್ಯಕ್ತಿ ಆಗುವುದು ಹೇಗೆ? ವಿಷಯ ಚಿಂತನ ಮಾಡಿದ ಶ್ರೀಗಳು, ಸಾಮಾಜಿಕ ಜೀವನದಲ್ಲಿ, ವೈಯುಕ್ತಿಕ ಜೀವನದಲ್ಲಿ ಆಗಾಗ ಶೂನ್ಯವು ಕವಿದು ಬದುಕನ್ನು ಆವರಿಸಿಕೊಳ್ಳುತ್ತದೆ. ಯಾವುದೇ ಸಂದರ್ಭದಲ್ಲಿ ಉಂಟಾಗುವ ಶೂನ್ಯವನ್ನು ತುಂಬಿಕೊಡುವ ವ್ಯಕ್ತಿಗಳು ಸಮಾಜಕ್ಕೆ ದೇಶಕ್ಕೆ ಬೇಕು. ಶೂನ್ಯ ನಿರ್ಮಿಸುವವರೂ ಇದ್ದಾರೆ. ಶೂನ್ಯ ತುಂಬಿಕೊಡುವವರಿಗೆ ಸಾಮಾಜಿಕ ಕಾಳಜಿ ಇರಬೇಕು. ವ್ಯಕ್ತಿಯ ಪ್ರಾಮಾಣಿಕತೆ, ಪ್ರಬುದ್ಧತೆ, ಪ್ರಯೋಗಶೀಲತೆಯಿಂದ ಸಮಾಜ ಭರ್ತಿಯಾಗುತ್ತ ಹೋಗುತ್ತದೆ. ಕೆಲವರು ಸಮರ್ಥವಾಗಿ ಶೂನ್ಯವನ್ನು ಭರ್ತಿ ಮಾಡುತ್ತಾರೆ. ಪಲಾಯನವಾದಿಗಳು ಲಕ್ಷೋಪಲಕ್ಷ ಸಿಗುತ್ತಾರೆ. ಮೋಸಗಾರರು ಬೇಕಾದಷ್ಟಿದ್ದಾರೆ. ಆದರೆ ಭರವಸೆಯ ವ್ಯಕ್ತಿಗಳು ಸಿಗುವುದು ದುರ್ಲಭ ಎಂದರು.

ಮಾನವನಿಗೆ ಜನಮುಖಿಯಾದ ಆಲೋಚನೆಗಳು ಇರಬೇಕು. ಜಗತ್ತು ಸ್ವಾರ್ಥದಿಂದ ತುಂಬಿಹೋಗಿದೆ. ಸಮಾಜಕ್ಕೆ, ದೇಶಕ್ಕೆ ನಿಸ್ವಾರ್ಥ ವ್ಯಕ್ತಿಗಳು ಬೇಕಾಗುತ್ತಾರೆ. ನಮಗೆ ಅನೇಕ ವಿಷಯಗಳನ್ನು ಬೋಧಿಸುವವರು ಬೇಕಾಗಿದ್ದಾರೆಂದು ಪ್ರಕಟಣೆ ಇರುತ್ತದೆ. ಆದರೆ ಭರವಸೆಯ ವ್ಯಕ್ತಿಗಳು ಬೇಕೆಂದು ಯಾರೂ ಪ್ರಕಟಣೆ ಹಾಕುವುದಿಲ್ಲ. ಭದ್ರ ಭವಿಷ್ಯವನ್ನು ಸೃಷ್ಟಿಸುವವರು ಬೇಕು. ಬದುಕಿನ ಭದ್ರತೆಯನ್ನು ಕಾಪಾಡುವವರು ಬೇಕು. ಸಮಾಜದಲ್ಲಿ ಮೂರು ಹಂತದ ಜನರಿದ್ದಾರೆ.

1) ಭಂಡತನದೊಂದಿಗಿನ ಬದುಕು : ಭಂಡತನ ಯಾವುದೇ ಹಂತದಲ್ಲಿಯೂ ಬದುಕಿನಲ್ಲಿ ಆವರಿಸಬಾರದು. ಅವರು ಜೀವನದ ನಿರ್ವಹಣೆಯನ್ನು ಮಾಡುವಾಗ ಮೋಸ ಮಾಡುತ್ತಾರೆ. ಅವರಲ್ಲಿ ಸಮಯ ಸಾಧಕತನ ಇರುತ್ತದೆ. ಸಮಯಕ್ಕೆ ತಕ್ಕಂತೆ ಬಣ್ಣ ಬದಲಿಸುತ್ತಾರೆ. ಗೋಸುಂಬೆ ಜೀವನ ಅವರದು. ನಾಟಕೀಯವಾದ ನಡವಳಿಕೆ. ಯಾವುದೇ ಅಕೃತ್ಯಕ್ಕೂ ಸಿದ್ಧರಿರುತ್ತಾರೆ.

2) ಬಂಡವಾಳದೊಂದಿಗಿನ ಬದುಕು : ಬಂಡವಾಳವಿಲ್ಲದೆ ಕೆಲವರಿಗೆ ಬದುಕು ಕಷ್ಟವಾಗುತ್ತದೆ. ಬಂಡವಾಳಕ್ಕಿಂತ ಭರವಸೆಯ ಬದುಕು ಎಂದುಕೊಂಡರೆ ಬದುಕು ಹಾರ್ದಿಕವಾಗಿರುತ್ತದೆ.

3) ಭರವಸೆಯೊಂದಿಗಿನ ಬದುಕು : ಈ ಬದುಕಿನಲ್ಲಿ ಬದ್ಧತೆ ಎದ್ದು ಕಾಣುತ್ತದೆ. ಭರವಸೆಯು ಬದ್ಧತೆಯೊಂದಿಗೆ ಸಾಗುವ ಏಣಿ. ನಮಗೆ ಬದ್ಧತೆ, ಪ್ರಬುದ್ಧತೆಯೂ ಬೇಕು. ಸತ್ಪುರುಷರ, ಸಮಾಜ ಚಿಂತಕರ, ದಾರ್ಶನಿಕರಲ್ಲಿ ಬದ್ಧತೆ ಮತ್ತು ಪ್ರಬುದ್ಧತೆ ಇತ್ತು. 21ನೇ ಶತಮಾನದಲ್ಲಿ ಬದುಕುಗಳು ನುಚ್ಚು ನೂರಾಗುತ್ತಿವೆ. ಕಾರಣ ಬದ್ಧತೆ ಇಲ್ಲದಿರುವುದು. ಪ್ರಬುದ್ಧರ ಬದುಕು ಎಂದೆಂದಿಗೂ ಶಾಶ್ವತ. ಸಮಾಜವು ಒಂದು ನೌಕೆ. ಅದನ್ನು ಚಾಲನೆ ಮಾಡುವವರು ಪ್ರಬುದ್ಧರಾಗಿರಬೇಕು. ಆದರೆ ಸಮಾಜದಲ್ಲಿ ಅಪ್ರಬುದ್ಧ ನಡೆ ನುಡಿ ಜಾಸ್ತಿಯಾಗುತ್ತಿರುವುದು ಕಳವಳಕಾರಿಯಾದ ಸಂಗತಿ.

ನಮಗೆ ಬೇಕಿರುವುದು ಗಟ್ಟಿತನ. ಇದರ ಮೇಲೆ ಬದುಕು ಕಟ್ಟಿಕೊಳ್ಳಬೇಕು. ಒಳ್ಳೆಯದಕ್ಕಾಗಿ ಸ್ವಪ್ರಯತ್ನ, ಸತತ ಪ್ರಯತ್ನ ಮಾಡಬೇಕಿದೆ. ಇದರಿಂದ ಬಲಿಷ್ಠ ಭಾರತ, ಸಮೃದ್ಧ ಭಾರತ ನಿರ್ಮಾಣವಾಗುತ್ತದೆ. ಮನೆಗೊಬ್ಬರು ಬಲಿಷ್ಠ ವ್ಯಕ್ತಿಗಳಿರಬೇಕು. ಆಗ ಮಾತ್ರ ಕಲ್ಯಾಣ ರಾಷ್ಟ್ರ ಕಾಣಲು ಸಾಧ್ಯವಿದೆ. ಆಗ ಅನಾಥ ಪ್ರಜ್ಞೆ ಯಾರನ್ನೂ ಕಾಡುವುದಿಲ್ಲ ಎಂದರು. ಸಮ್ಮುಖ ವಹಿಸಿದ್ದ

ದಾಬಸ್‌ಪೇಟೆಯ ವನಕಲ್ಲು ಮಲ್ಲೇಶ್ವರ ಮಠದ ಶ್ರೀ ಬಸವ ರಮಾನಂದ ಸ್ವಾಮಿಗಳು ಮಾತನಾಡಿ, ನಂಬಿಕೆಗೆ ಅರ್ಹರಾದವರು ಅವರು ಭರವಸೆಯ ವ್ಯಕ್ತಿಗಳಾಗುತ್ತಾರೆ. ಮನುಷ್ಯ ಸಾಧಿಸಬೇಕೆಂದರೆ ನಂಬಿಕೆ ಬಹಳ ಮುಖ್ಯ. ಅದು ವ್ಯಕ್ತಿ ಮತ್ತು ಸಮಷ್ಟಿ. ಬದುಕಿಗೆ ಭರವಸೆ ತುಂಬಿದವರು ಬಸವಣ್ಣನವರು. ಅವರ ಹಾದಿಯಲ್ಲಿ ನಡೆಯುತ್ತಿರುವವರು ಮುರುಘಾ ಶರಣರು. ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಗಾಂಧೀಜಿ ಭರವಸೆಯ ವ್ಯಕ್ತಿಯಾಗುತ್ತಾರೆ. ಅನೇಕ ಮಹಾತ್ಮರು ಸಾರ್ಥಕವಾದ ಬದುಕು ಕಂಡವರು. ನಮ್ಮೊಳಗೆ ನೂರಾರು ಸಮಸ್ಯೆಗಳು ಬಂದರೂ ಅವುಗಳನ್ನು ಎದುರಿಸುವ ಶಕ್ತಿ ನಮ್ಮದಾಗಬೇಕೆಂದರು.

ಕಾರ್ಯಕ್ರಮದ ದಾಸೋಹಿಗಳಾದ ಸೇತೂರಾಂ ಹಾಗು ಬಿಜೆಪಿ ಜಿಲ್ಲಾಧ್ಯಕ್ಷ ಮುರಳಿ ಮಾತನಾಡಿದರು. ಶ್ರೀ ಬಸವನಾಗಿದೇವ ಸ್ವಾಮಿಗಳು, ಎಲ್.ಬಿ. ರಾಜಶೇಖರ್, ಶ್ರೀಮತಿ ಗಾಯತ್ರಿ ಶಿವರಾಂ, ಡಾ. ಕೆ.ಸಿ. ರಮೇಶ್ ಮೊದಲಾದವರು ಭಾಗವಹಿಸಿದ್ದರು. ಜಮುರಾ ಕಲಾವಿದರು ಪ್ರಾರ್ಥಿಸಿದರು. ಚಿತ್ರಲಿಂಗಪ್ಪ ಸ್ವಾಗತಿಸಿದರು. ಮಂಜುನಾಥ ಗುಪ್ತ ನಿರೂಪಿಸಿದರು.




